# ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮಾಗಡಿ

## ಕ್ರಿಮಿನಲ್ ಪ್ರಕರಣ ಸಂಖ್ಯೆ : 690 / 2012

ಪಿರ್ಯಾದುದಾರರು : ಕುದೂರು ಪೋಲಿಸ್ ಠಾಣೆ

**ವಿರುದ್ಧ**

**3 ನೇ ಆರೋಪಿ : ಚಂದ್ರ ಕೆಎಂ @ ಪುಂಗ ಬಿನ್ ಮುನಿರಾಜು, ವರ್ಷಗಳು, ನಂ:344, ವೆಂಕಟೇಶ್ವರ ನಿಲಯ, ಪೀಣ್ಯಾ 2 ನೇ ಹಂತ, ರಾಘವೇಂದ್ರ ಬಡಾವಣೆ , ಬೆಂಗಳೂರು.**

**( 1, 2 ಮತ್ತು 4 ನೇ ಆರೋಪಿತರುಗಳನ್ನು ಈ ಪ್ರಕರಣದಿಂದ ಪ್ರತ್ಯೇಕಿಸಲಾಗಿರುತ್ತದೆ)**

## ದೋಷರೋಪಣೆ

( ಶ್ರೀಮತಿ. ಲತಾ ಜೆ, ಅಪರ ನ್ಯಾಯಿಕ ದಂಡಾಧಿಕಾರಿಯಾದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆಯನ್ನು ಮಾಡುತ್ತಿದ್ದೇನೆ )

ದಿನಾಂಕ: 05-06-2013 ರಂದು ಗಂಗಾಧರ, ಶ್ರೀಕಾಂತ@ಕಾಂತ, ಮತ್ತು ಸಂಜು@ಸಂಜಯ ಹಾಗೂ 3 ನೇ ಆರೋಪಿಯಾದ ನೀವು ಚಾಸಾ-1: ನಾಗರಾಜು ರವರ ಇಂಡಿಕಾ ಕಾರ್ ನಂಬರ್: ಕೆಎ-05-ಎಎ-1945 ನ್ನು ಹೂಳಿಹಾರ್ ಬಳಿಯಿರುವ ನಂದಿಹಳ್ಳಿಗೆ ಹೋಗಲೆಂದು ಒಂದು ಕಿ.ಮೀ. 6.30 ರೂಪಾಯಿಗಳಂತೆ ಬಾಡಿಗೆಗೆ ಮಾತಾಡಿ ಹೊಸದುರ್ಗದಿಂದ ಬಾಡಿಗೆಗೆ ಕರೆದುಕೊಂಡು ಬಂದು, ದಾಬಸ್‌ಪೇಟೆ ಮುಖಾಂತರ ಬರುವ ದಾರಿಯಲ್ಲಿ ರಾತ್ರಿ 9 ಗಂಟೆಯ ಸಮಯದಲ್ಲಿ ಕುದೂರು ಪೋಲಿಸ್ ಠಾಣೆ ಸರಹದ್ದು, ಶ್ರೀಗಿರಿಪುರದ ದೊಳ್ಳೆನಹಳ್ಳಿ ಸಮೀಪ ಮೂತ್ರ ವಿಸರ್ಜನೆಗೆಂದು

ಕಾರನ್ನು ನಿಲ್ಲಿಸುವಂತೆ ಹೇಳಿದರು ಕಾರನ್ನು ನಿಲ್ಲಿಸುವಾಗ ನಿಮ್ಮಗಳ ಪೈಕಿ ಒಬ್ಬರು ಚಾಸಾ-1 ರವರಿಗೆ ಚಾಕು ತೋರಿಸಿ, ಬೆದರಿಕೆ ಹಾಕಿ ಮತ್ತೊಬ್ಬರು ಕಣ್ಣಿಗೆ ಮಣ್ಣು ಎರಚಿ ಚಾಸಾ-1 ರವರ ಬಳಿಯಿದ್ದ ಎರಡು ಮೊಬೈಲ್ ಪೋನುಗಳು ಹಾಗೂ 600 ನಗದು ಹಣ ಕಿತ್ತುಕೊಂಡು ಅವರನ್ನು ಕಾರಿನಿಂದ ಹೊರಗೆ ತಳ್ಳಿ ಇಂಡಿಕಾ ಕಾರ್ ನಂಬರ್ಃ ಕೆಎ-05-ಎಎ-1945 ನ್ನು ಕಿತ್ತುಕೊಂಡು ಹೋಗಿದ್ದು, ಇದು ತನಿಖೆಯಿಂದ ದೃಢಪಟ್ಟಿದ್ದು, ಸದರಿ ಕೃತ್ಯವು ಭಾರತೀಯ ದಂಡ ಸಂಹಿಂತೆ ಕಲಂ-392 ರ ರೀತ್ಯಾ ಶಿಕ್ಷಾರ್ಹ ಅಪರಾಧವಾಗಿದ್ದು, ನನ್ನ ಸಂಜ್ಞೆಗೆ ಒಳಪಡುತ್ತದೆ.

ಪ್ರಶ್ನೆ-1 ಃ ನೀವು ಈ ಮೇಲಿನ ಆಪಾದನೆಯನ್ನು ಕೇಳಿದಿರಾ ?

**3 ನೇ ಆರೋಪಿ ಉತ್ತರ ಃ**

ಪ್ರಶ್ನೆ-2 ಃ ನೀವು ಆಪಾದನೆಯನ್ನು ಒಪ್ಪುಕೊಳ್ಳುತ್ತೀರಾ ಅಥವಾ ಏನಾದರೂ ಹೇಳುವುದಿದೇಯಾ?

**3 ನೇ ಆರೋಪಿ ಉತ್ತರ ಃ**

( ಈ ಮೇಲ್ಕಂಡ ಆಪಾದನೆಯನ್ನು ನೀವು ಈ ನ್ಯಾಯಾಲಯದ ಸಂಜ್ಞೆದೊಳಗೆ ಎಸಗಿರುವುದಾಗಿ ಈ ಮೂಲಕ ನ್ಯಾಯಾಲಯದ ವಿಚಾರಣೆಗೆ ಒಳಪಟ್ಟಿರುವುದಾಗಿ ಈ ಮೂಲ ನಿರ್ದೇಶಿಸಿತ್ತೇನೆ )

ಈ ಮೇಲ್ಕಂಡ ಆರೋಪಿತನ ಹೇಳಿಕೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ, ಹೇಳಿ, ಕೇಳಿ, ಸರಿ ಇದೆ ಎಂದು ನನ್ನ ಸಮಕ್ಷಮ ದಿನಾಂಕಃ 04-04-2018 ರಂದು ಸಹಿ ಮಾಡಿರುತ್ತಾರೆ )

( ಲತಾ ಜೆ )
ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು
ಜೆಎಂಎಫ್‌ಸಿ ನ್ಯಾಯಾಲಯ, ಮಾಗಡಿ.